# ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯದ ನಡವಳಿ

**ವಿಷಯ:-** 2022-23ನೇ ಸಾಲಿನ ಏಪ್ರಿಲ್-2022 ರಿಂದ ಜೂನ್-2022 ರವರೆಗಿನ ಮೊದಲನೇ ತ್ರೈಮಾಸಿಕ ಕಂತಿನ ಶಾಸನಬದ್ಧ ಅನುದಾನವನ್ನು ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆ ಮಾಡುವ ಬಗ್ಗೆ.

**ಓದಲಾಗಿದೆ:-**
1. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 112 ಗ್ರಾಪಂಅ 2021, ದಿನಾಂಕ:28.12.2021
2. ಸರ್ಕಾರದ ಆದೇಶ ಸಂಖ್ಯೆ:ಎಫ್.ಡಿ 01 ಟಿ ಎಫ್ ಪಿ 2020-2022, ದಿನಾಂಕ:04.04.2022
3. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ/03/ಎಎಫ್ಎನ್/2022, ಬೆಂಗಳೂರು, ದಿನಾಂಕ:06.04.2022
4. ಸರ್ಕಾರದ ಆದೇಶ ಸಂಖ್ಯೆ: ಕೆಪಿಆರ್‌ಸಿ-ಕವಿ/4/2022 ಬೆಂಗಳೂರು, ದಿನಾಂಕ:23.05.2022

**********

**ಪ್ರಸ್ತಾವನೆ:**

2022-23 ನೇ ಸಾಲಿನ ರಾಜ್ಯ ಸರ್ಕಾರದ ಆಯವ್ಯಯದಲ್ಲಿ ಲೆಕ್ಕ ಶೀರ್ಷಿಕೆ 2515-00-198-1-07-300ರ ಅಡಿಯಲ್ಲಿ **"ಗ್ರಾಮ ಪಂಚಾಯಿತಿಗಳಿಗೆ ರಾಜ್ಯ ಹಣಕಾಸು ಆಯೋಗದ ಅಭಿವೃದ್ಧಿ ಅನುದಾನ/ ಗ್ರಾಮ ಪಂಚಾಯಿತಿಗಳಿಗೆ ಸಹಾಯ"** ಹೆಸರಿನಲ್ಲಿ ಒಟ್ಟು ರೂ.1,203,42,07,000 (ರೂ.ಒಂದು ಸಾವಿರದ ಎರಡು ನೂರಾ ಮೂರು ಕೋಟಿ ನಲವತ್ತೆರಡು ಲಕ್ಷದ ಏಳು ಸಾವಿರ) ಗಳನ್ನು ಒದಗಿಸಿದ್ದು, ಈ ಪೈಕಿ ವಾರ್ಷಿಕವಾಗಿ ರೂ. 652,99,00,000/- (ರೂ.ಆರು ನೂರಾ ಐವತ್ತೆರಡು ಕೋಟಿ ತೊಂಬತ್ತೊಂಬತ್ತು ಲಕ್ಷ)ಗಳು ಶಾಸನಬದ್ಧ ಅನುದಾನವಾಗಿದ್ದು, ಇದರ ಶೇ.60ರಷ್ಟು ಅಂದರೆ ರೂ.391,79,40,000/- (ರೂ.ಮೂರು ನೂರಾ ತೊಂಬತ್ತೊಂದು ಕೋಟಿ ಎಪ್ಪತ್ತೊಂಬತ್ತು ಲಕ್ಷದ ನಲವತ್ತು ಸಾವಿರ) ಗಳನ್ನು ಗ್ರಾಮ ಪಂಚಾಯತಿಗಳ ವಿದ್ಯುತ್ ಬಿಲ್ ಮೊತ್ತ ಭರಿಸಲು ಹಾಗೂ ಶೇ.40ರಷ್ಟು ಅಂದರೆ ರೂ. 261,19,60,000/- (ರೂ.ಎರಡು ನೂರಾ ಅರವತ್ತೊಂದು ಕೋಟಿ ಹತ್ತೊಂಬತ್ತು ಲಕ್ಷದ ಅರವತ್ತು ಸಾವಿರ) ಗಳನ್ನು ಗ್ರಾಮ ಪಂಚಾಯತಿ ಸಿಬ್ಬಂದಿಗಳ ವೇತನ ಪಾವತಿ ಮಾಡಲು ಮತ್ತು ಸಿಬ್ಬಂದಿ ವೇತನಕ್ಕೆ ಅನುದಾನ ಕೊರತೆಯಾಗುವುದರಿಂದ ಆಯವ್ಯಯದಲ್ಲಿ ನಿಗದಿಪಡಿಸಿದ ಉಳಿಕೆ ಅನುದಾನ ರೂ. 550,43,07,000/- (ರೂ. ಐದು ನೂರಾ ಐವತ್ತು ಕೋಟಿ ನಲವತ್ತ ಮೂರು ಲಕ್ಷದ ಏಳು ಸಾವಿರ)ಗಳು ಸೇರಿದಂತೆ ಸಿಬ್ಬಂದಿ ವೇತನಕ್ಕಾಗಿ ರೂ.811,62,67,000/- (ರೂ.ಎಂಟು ನೂರಾ ಹನ್ನೊಂದು ಕೋಟಿ ಅರವತ್ತೆರಡು ಲಕ್ಷದ ಅರವತ್ತೇಳು ಸಾವಿರ) ಗಳನ್ನು ಹಂಚಿಕೆ ಮಾಡಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ(2)ರ ಆದೇಶದಲ್ಲಿ 2022-23ನೇ ಸಾಲಿಗೆ ಹಂಚಿಕೆಯಾದ ಅನುದಾನದಲ್ಲಿ ಮೊದಲನೇ ತ್ರೈಮಾಸಿಕ ಕಂತಿನ ಅನುದಾನ ಬಿಡುಗಡೆ ಮಾಡಲು ಇಲಾಖಾ ಮುಖ್ಯಸ್ಥರಿಗೆ ಆರ್ಥಿಕ ಅಧಿಕಾರ ಪ್ರತ್ಯಾಯೋಜನೆ ಮಾಡಿ ಆದೇಶಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ(4) ರ ಆದೇಶದಲ್ಲಿ ರಾಜ್ಯದಲ್ಲಿನ ಗ್ರಾಮ ಪಂಚಾಯಿತಿ ಸಿಬ್ಬಂದಿಗಳ ವೇತನ ಪಾವತಿಸಲು ಲೆಕ್ಕ ಶೀರ್ಷಿಕೆ:2515-00-198-1-07-300 ನ್ನು ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯಕ್ಕೆ ವರ್ಗಾವಣೆ ಮಾಡಲಾಗಿದ್ದು, ಸದರಿ ಲೆಕ್ಕ ಶೀರ್ಷಿಕೆಯ ನಿರ್ವಹಣೆಗೆ ನಿರ್ದೇಶಕರು(ಅಭಿವೃದ್ಧಿ), ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು, ಇವರನ್ನು ಹಣ ಸೆಳೆಯುವ ಅಧಿಕಾರಿಯನ್ನಾಗಿ (ಡಿ.ಡಿ.ಓ) ಹಾಗೂ ಆಯುಕ್ತರು,

ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು, ಇವರನ್ನು ಮೇಲುರುಜು ಅಧಿಕಾರಿಯನ್ನಾಗಿ ನೇಮಿಸಿ ಆದೇಶಿಸಲಾಗಿದೆ.

ರಾಜ್ಯದ 5954 ಗ್ರಾಮ ಪಂಚಾಯಿತಿಗಳಲ್ಲಿ ಎಸ್ಕ್ರೋ ಖಾತೆಗಳನ್ನು ಮುಕ್ತಾಯಗೊಳಿಸಿರುವ 3(ಕಲ್ಬುರ್ಗಿ-1, ತುಮಕೂರು-1, ಯಾದಗಿರಿ-1) ಗ್ರಾಮ ಪಂಚಾಯಿತಿಗಳನ್ನು ಹೊರತುಪಡಿಸಿ ಉಳಿದಂತೆ 5951 ಗ್ರಾಮ ಪಂಚಾಯಿತಿಗಳಿಗೆ ಮೊದಲನೇ ತ್ರೈಮಾಸಿಕ ಶಾಸನಬದ್ಧ ಅನುದಾನ ರೂ. 97,89,86,611/-(ರೂ. ತೊಂಬತ್ತೇಳು ಕೋಟಿ ಎಂಬತ್ತೊಂಬತ್ತು ಲಕ್ಷದ ಎಂಬತ್ತಾರು ಸಾವಿರದ ಆರು ನೂರಾ ಹನ್ನೊಂದು) ಗಳನ್ನು ವಿದ್ಯುತ್ ಬಿಲ್ ಪಾವತಿಗಾಗಿ ಬಿಡುಗಡೆಗೊಳಿಸಬಹುದಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ(1) ರಲ್ಲಿ ರಾಜ್ಯದಲ್ಲಿನ ಗ್ರಾಮ ಪಂಚಾಯತಿ ಸಿಬ್ಬಂದಿಗಳ ವೇತನ ಪಾವತಿಸುವ ಬಗ್ಗೆ ಮಾರ್ಗಸೂಚಿಗಳನ್ನು ಹೊರಡಿಸಲಾಗಿದ್ದು, 15ನೇ ಹಣಕಾಸು ಆಯೋಗದ ಅನುದಾನದಲ್ಲಿ ಕುಡಿಯುವ ನೀರು ಸರಬರಾಜು ಮತ್ತು ಸ್ವಚ್ಚತೆ ಸೇವೆಯನ್ನು ಒದಗಿಸುವ ಸಿಬ್ಬಂದಿಗೆ ವೇತನ ಪಾವತಿಸಲು ಅವಕಾಶವಿರುತ್ತದೆ.

ವಾರ್ಷಿಕವಾಗಿ ರೂ.50.00 ಲಕ್ಷಕ್ಕಿಂತ ಹೆಚ್ಚಿನ ಸ್ವಂತ ಸಂಪನ್ಮೂಲ ಬೇಡಿಕೆ ಹೊಂದಿರುವ ರಾಜ್ಯದ 175 ಗ್ರಾಮ ಪಂಚಾಯತಿಗಳು ತಮ್ಮಲ್ಲಿ ಲಭ್ಯವಿರುವ ಸ್ವಂತ ಸಂಪನ್ಮೂಲದಲ್ಲಿ ತಮ್ಮ ಸಿಬ್ಬಂದಿಗಳಿಗೆ ವೇತನ ಪಾವತಿಸಬಹುದಾದ ಹಿನ್ನಲೆಯಲ್ಲಿ, ಇವುಗಳನ್ನು ಹೊರತುಪಡಿಸಿ, ಉಳಿದ 5779 ಗ್ರಾಮ ಪಂಚಾಯತಿಗಳಿಗೆ ಮಾತ್ರ ವೇತನಕ್ಕಾಗಿ ನಿಗಪಡಿಸಿದ ಉಳಿಕೆ ಅನುದಾನದಿಂದ ಬಿಡುಗಡೆ ಮಾಡಲು ಕ್ರಮವಹಿಸಲಾಗುತ್ತಿದೆ.

ಮೇಲ್ಕಂಡ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಅನುದಾನದ ಕೊರತೆ ಇರುವುದರಿಂದ, ಎಲ್ಲಾ ಗ್ರಾಮ ಪಂಚಾಯತಿಗಳಿಗೆ ಏಕರೂಪ ವೇತನ ಅನುದಾನ ಹಂಚಿಕೆ ಮಾಡುವ ಹಿತದೃಷ್ಟಿಯಿಂದ, ಸಿಬ್ಬಂದಿಗಳ ತ್ರೈಮಾಸಿಕ ವೇತನ ಪಾವತಿಗಾಗಿ ಪ್ರತಿ ಗ್ರಾಮ ಪಂಚಾಯತಿಯ ಬೇಡಿಕೆಯ ಒಟ್ಟಾರೆ ಅನುದಾನದಲ್ಲಿ ಸರಾಸರಿ ಸುಮಾರು ಶೇ.06ರಷ್ಟು ಕಡಿತಗೊಳಿಸಿ ಪ್ರಸ್ತುತ ರಾಜ್ಯದಲ್ಲಿನ ಒಟ್ಟು 5954 ಗ್ರಾಮ ಪಂಚಾಯಿತಿಗಳ 52,121 ಸಿಬ್ಬಂದಿಗಳಿಗೆ ಮೊದಲನೇ ತ್ರೈಮಾಸಿಕ ಶಾಸನಬದ್ಧ ಅನುದಾನ ರೂ.65,29,90,000/- (ರೂ. ಅರವತ್ತೈದು ಕೋಟಿ ಇಪ್ಪತ್ತೊಂಬತ್ತು ಲಕ್ಷದ ತೊಂಬತ್ತು ಸಾವಿರ) ಗಳನ್ನು ಮತ್ತು ಮೇಲೆ ವಿವರಿಸಿರುವಂತೆ ವಾರ್ಷಿಕವಾಗಿ ರೂ.50.00ಲಕ್ಷಕ್ಕಿಂತ ಹೆಚ್ಚಿನ ಬೇಡಿಕೆ ಹೊಂದಿರುವ 175 ಗ್ರಾಮ ಪಂಚಾಯತಿಗಳನ್ನು ಹೊರತುಪಡಿಸಿ, 5779 ಗ್ರಾಮ ಪಂಚಾಯತಿಗಳಿಗೆ ವೇತನಕ್ಕಾಗಿ ಮಾತ್ರ ನಿಗದಿಪಡಿಸಿದ ಅನುದಾನ ರೂ. 550,43,07,000/- (ರೂ.ಐದು ನೂರಾ ಐವತ್ತು ಕೋಟಿ ನಲವತ್ತ ಮೂರು ಲಕ್ಷದ ಏಳು ಸಾವಿರ) ಗಳಲ್ಲಿ ಮೊದಲನೇ ತ್ರೈಮಾಸಿಕ ಅನುದಾನ ರೂ. 137,60,76,750/- (ರೂ.ಒಂದು ನೂರಾ ಮೂವತ್ತೇಳು ಕೋಟಿ ಅರವತ್ತು ಲಕ್ಷದ ಎಪ್ಪತ್ತಾರು ಸಾವಿರದ ಏಳು ನೂರಾ ಐವತ್ತು) ಗಳು ಸೇರಿ ಒಟ್ಟು ರೂ. 202,90,66,750/-(ರೂ. ಎರಡು ನೂರಾ ಎರಡು ಕೋಟಿ ತೊಂಬತ್ತು ಲಕ್ಷ ಅರವತ್ತಾರು ಸಾವಿರದ ಏಳು ನೂರಾ ಐವತ್ತು)ಗಳನ್ನು ಹಂಚಿಕೆ ಮಾಡಲಾಗಿದೆ

ಒಟ್ಟಾರೆ ಗ್ರಾಮ ಪಂಚಾಯತಿಗಳ ವಿದ್ಯುತ್ ಬಿಲ್ಲು ಮೊತ್ತ ಭರಿಸಲು ರೂ. 97,89,86,611/- (ರೂ. ತೊಂಬತ್ತೇಳು ಕೋಟಿ ಎಂಬತ್ತೊಂಬತ್ತು ಲಕ್ಷದ ಎಂಬತ್ತಾರು ಸಾವಿರದ ಆರು ನೂರಾ ಹನ್ನೊಂದು) ಹಾಗೂ ಗ್ರಾಮ ಪಂಚಾಯಿತಿಗಳ ಸಿಬ್ಬಂದಿ ವೇತನಕ್ಕಾಗಿ ರೂ. 202,90,66,750/-(ರೂ. ಎರಡು ನೂರಾ ಎರಡು ಕೋಟಿ ತೊಂಬತ್ತು ಲಕ್ಷ ಅರವತ್ತಾರು ಸಾವಿರದ ಏಳು ನೂರಾ ಐವತ್ತು)ಗಳನ್ನು ಸೇರಿ ಒಟ್ಟು ರೂ.300,80,53,361/-(ರೂ. ಮೂರು ನೂರು ಕೋಟಿ ಎಂಭತ್ತು ಲಕ್ಷದ ಐವತ್ತ ಮೂರು ಸಾವಿರದ ಮೂರು ನೂರಾ ಅರವತ್ತೊಂದು)ಗಳನ್ನು ಮೊದಲನೇ ತ್ರೈಮಾಸಿಕ ಕಂತಿನ (ಏಪ್ರಿಲ್-2022 ರಿಂದ ಜೂನ್-2022) ಅನುದಾನವಾಗಿ ಸಂಬಂಧಪಟ್ಟ ಗ್ರಾಮ

ಪಂಚಾಯಿತಿಗಳ ಬ್ಯಾಂಕ್ ಖಾತೆಗಳಿಗೆ ಬಿಡುಗಡೆ ಮಾಡಲು ನಿರ್ಧರಿಸಲಾಗಿದೆ. ಅದರಂತೆ ಈ ಕೆಳಕಂಡ ಆದೇಶ.

**ಆದೇಶ ಸಂಖ್ಯೆ: ಕಪಂರಾಅ/ಅಭಿವೃದ್ಧಿ/253 /2022, ಬೆಂಗಳೂರು ದಿನಾಂಕ: 21.06.2022**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2022-23ನೇ ಸಾಲಿನ ಶಾಸನಬದ್ಧ ಅನುದಾನದ ಮೊದಲನೇ ತ್ರೈಮಾಸಿಕ(ಏಪ್ರಿಲ್-2022 ರಿಂದ ಜೂನ್-2022) ಕಂತಿನ ಅನುದಾನ ಮೊತ್ತ ರೂ. 300,80,53,361/- (ರೂ.ಮೂರು ನೂರು ಕೋಟಿ ಎಂಬತ್ತು ಲಕ್ಷದ ಐವತ್ತ ಮೂರು ಸಾವಿರದ ಮೂರು ನೂರಾ ಅರವತ್ತೊಂದು ಮಾತ್ರ)ಗಳನ್ನು ಲೆಕ್ಕ ಶೀರ್ಷಿಕೆ 2515-00-198-1-07-300 ರಲ್ಲಿ 5954 ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆ ಮಾಡಿರುವ ಅನುದಾನ ವಿವರವನ್ನು ಅನುಬಂಧ-1ರಲ್ಲಿ ಇರುವಂತೆ ಶಾಸನಬದ್ಧ ಅನುದಾನದ ಬ್ಯಾಂಕ್ ಖಾತೆಗಳಿಗೆ ಮತ್ತು ಅನುಬಂಧ-2ರಲ್ಲಿ ಇರುವಂತೆ ಎಸ್ಕ್ರೋ ಅನುದಾನದ ಬ್ಯಾಂಕ್ ಖಾತೆಗಳಿಗೆ ರಾಜ್ಯ ಹುಜೂರ್ ಖಜಾನೆಯಿಂದ ಪೇಯಿಸ್ ರಶೀದಿ ಮೇಲೆ ಸೆಳೆದು ಬ್ಯಾಂಕ್ ಖಾತೆ ಸಂಖ್ಯೆ:64062923099ರ ಮೂಲಕ ಬಿಡುಗಡೆ ಮಾಡಿ ಆದೇಶಿಸಿದೆ.

1. ಅನುಬಂಧ-3ರಲ್ಲಿನ 175 ಗ್ರಾಮ ಪಂಚಾಯತಿಗಳು ವಾರ್ಷಿಕವಾಗಿ ರೂ.50.00ಲಕ್ಷಕ್ಕೂ ಹೆಚ್ಚು ಆದಾಯ ಗಳಿಸುವ ಸ್ವಂತ ಸಂಪನ್ಮೂಲ ಹೊಂದಿರುವ ಹಿನ್ನೆಲೆಯಲ್ಲಿ ಸದರಿ ಗ್ರಾಮ ಪಂಚಾಯತಿಗಳು ತಮ್ಮಲ್ಲಿ ಲಭ್ಯವಿರುವ ಸ್ವಂತ ಸಂಪನ್ಮೂಲದಲ್ಲಿ ಸಿಬ್ಬಂದಿಗಳ ವೇತನವನ್ನು ಪಾವತಿಸುವುದು.

2. 2021-22 ನೇ ಸಾಲಿನ ಎರಡನೇ ತ್ರೈಮಾಸಿಕ ಕಂತಿನ ಅನುದಾನ ಬಿಡುಗಡೆ ಸಂದರ್ಭದಲ್ಲಿ ಒಂದೇ ಹೆಸರಿನ ಗ್ರಾಮ ಪಂಚಾಯಿತಿಗಳ ಪೈಕಿ 26 ಗ್ರಾಮ ಪಂಚಾಯಿತಿಗಳಿಗೆ ಹೆಚ್ಚುವರಿ ಅನುದಾನ ಬಿಡುಗಡೆಯಾಗಿದ್ದು, ಸದರಿ ಗ್ರಾಮ ಪಂಚಾಯಿತಿಗಳ ವಿವರಗಳನ್ನು ಅನುಬಂಧ-4 ರಲ್ಲಿ ಲಗತ್ತಿಸಿದೆ. ಸದರಿ ಗ್ರಾಮ ಪಂಚಾಯಿತಿಗಳಿಗೆ ಈಗಾಗಲೇ ಹೆಚ್ಚುವರಿ ಅನುದಾನ ಬಿಡುಗಡೆಯಾಗಿರುವುದರಿಂದ 2022-23ನೇ ಸಾಲಿನ ಮೊದಲನೇ ತ್ರೈಮಾಸಿಕ ಕಂತಿನ (ಏಪ್ರಿಲ್-2022 ರಿಂದ ಜೂನ್-2022) ಅನುದಾನದಲ್ಲಿ ಈ ಗ್ರಾಮ ಪಂಚಾಯಿಗಳ ಅನುದಾನವನ್ನು ಸಂಬಂಧಪಟ್ಟ 29 ಗ್ರಾಮ ಪಂಚಾಯಿತಿಗಳಿಗೆ ಹೊಂದಾಣಿಕೆ ಮಾಡಲಾಗಿರುತ್ತದೆ.

3. ಅನುಬಂಧ-1ರಲ್ಲಿ ಗ್ರಾಮ ಪಂಚಾಯತಿಗಳ ಸಿಬ್ಬಂದಿ ವೇತನಕ್ಕಾಗಿ ಬಿಡುಗಡೆ ಮಾಡುತ್ತಿರುವ ಅನುದಾನವನ್ನು ಏಪ್ರಿಲ್- 2022ರಿಂದ ಜೂನ್ -2022 ರವರೆಗಿನ ಗ್ರಾಮ ಪಂಚಾಯತಿ ಸಿಬ್ಬಂದಿ ವೇತನಕ್ಕಾಗಿ ಬಳಸತಕ್ಕದ್ದು ಹಾಗೂ ಈ ಹಿಂದಿನ ತಿಂಗಳುಗಳ ವೇತನವು ಪಾವತಿಸಲು ಬಾಕಿ ಇದ್ದಲ್ಲಿ ಗ್ರಾಮ ಪಂಚಾಯತಿಗಳು ತಮ್ಮ ಸ್ವಂತ ಸಂಪನ್ಮೂಲದಿಂದ ಪಾವತಿಸತಕ್ಕದ್ದು.

4. ಈ ಆದೇಶದಲ್ಲಿ ಸೂಚಿಸಿರುವ ಗ್ರಾಮ ಪಂಚಾಯತಿ ಸಿಬ್ಬಂದಿಗಳಿಗಿಂತ ಹೆಚ್ಚುವರಿ ಸಿಬ್ಬಂದಿ ನೇಮಕಾತಿಯಾಗಿದ್ದು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಂದ ಹುದ್ದೆ ಅನುಮೋದನೆಗೊಂಡ ಪ್ರಕರಣಗಳಿದ್ದಲ್ಲಿ ಅವರುಗಳಿಗೆ ವೇತನವನ್ನು ಗ್ರಾಮ ಪಂಚಾಯತಿಗಳು ತಮ್ಮ ಸ್ವಂತ ಸಂಪನ್ಮೂಲದಿಂದ ಕಡ್ಡಾಯವಾಗಿ ಪಾವತಿಸತಕ್ಕದ್ದು ಹಾಗೂ ಗ್ರಾಮ ಪಂಚಾಯತಿಗಳು ತಮ್ಮ ಸಿಬ್ಬಂದಿಗಳಿಗೆ ವೇತನ ಪಾವತಿಸುವುದು ಆದ್ಯ ಕರ್ತವ್ಯವೆಂದು ಪರಿಭಾವಿಸತಕ್ಕದ್ದು. ಈ ಸಂಬಂಧ ಲೋಪವೆಸಗಿದಲ್ಲಿ ಸಂಬಂಧಿಸಿದ ಪಂಚಾಯತಿ ಅಭಿವೃದ್ಧಿ ಅಧಿಕಾರಿಯನ್ನು ಹೊಣೆಗಾರರನ್ನಾಗಿ ಮಾಡಲಾಗುವುದು.

5. ಸರ್ಕಾರದಿಂದ ಈಗಾಗಲೇ ರಾಜ್ಯದಲ್ಲಿನ ಗ್ರಾಮ ಪಂಚಾಯತಿ ಸಿಬ್ಬಂದಿಗಳ ವೇತನ ಪಾವತಿಸುವ ಬಗ್ಗೆ ಮಾರ್ಗಸೂಚಿಗಳನ್ನು ಹೊರಡಿಸಲಾಗಿದ್ದು 15ನೇ ಹಣಕಾಸು ಆಯೋಗದ ಅನುದಾನದಲ್ಲಿ ಕುಡಿಯುವ ನೀರು ಸರಬರಾಜು ಮತ್ತು ಸ್ವಚ್ಛತೆ ಸೇವೆ ಒದಗಿಸುವ ಸಿಬ್ಬಂದಿಗಳಿಗೆ ವೇತನ ಪಾವತಿಗೆ ಅವಕಾಶವಿರುತ್ತದೆ.

6. ಗ್ರಾಮ ಪಂಚಾಯತಿಗಳು ಅನುಬಂಧ-2ರಲ್ಲಿ ಬಿಡುಗಡೆಯಾಗುತ್ತಿರುವ ಅನುದಾನವನ್ನು ಕಡ್ಡಾಯವಾಗಿ ವಿದ್ಯುತ್ ಬಿಲ್ಲುಗಳ ಸಲುವಾಗಿ ಪಾವತಿಸತಕ್ಕದ್ದು ಹಾಗೂ ಉಳಿದ ಹಣವನ್ನು ಇತರೆ ಅಭಿವೃದ್ಧಿ ಕಾರ್ಯಗಳಿಗಾಗಿ ಬಳಸಿಕೊಳ್ಳುವುದು. ಗ್ರಾಮ ಪಂಚಾಯತಿಗಳಲ್ಲಿ ವಿದ್ಯುತ್ ಬಿಲ್ಲು ಪಾವತಿಸಲು ಬಾಕಿ ಇದ್ದಲ್ಲಿ, ಅಂತಹ ಗ್ರಾಮ ಪಂಚಾಯತಿಗಳು ತಮ್ಮ ಸ್ವಂತ ಸಂಪನ್ಮೂಲದಿಂದ ವಿದ್ಯುತ್ ಬಿಲ್ಲುಗಳನ್ನು ಕಡ್ಡಾಯವಾಗಿ ಪಾವತಿಸತಕ್ಕದ್ದು.

7. ಮೇಲ್ಕಂಡ ಉದ್ದೇಶಗಳಿಗಲ್ಲದೇ ಈ ಅನುದಾನವನ್ನು ಗ್ರಾಮ ಪಂಚಾಯಿತಿಗಳು ಬೇರೆ ಯಾವುದೇ ಉದ್ದೇಶಕ್ಕೆ ವಿನಿಯೋಗಿಸತಕ್ಕದ್ದಲ್ಲ.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ:ಎಫ್.ಡಿ 01 ಟಿ ಎಫ್ ಪಿ 2020-2022, ದಿನಾಂಕ:04.04.2022 ಮತ್ತು ಕೆಪಿಆರ್ ಸಿ-ಕವಿ/4/2022 ಬೆಂಗಳೂರು, ದಿನಾಂಕ:23.05.2022 ರಂತೆ ಹೊರಡಿಸಲಾಗಿದೆ.

**(ಸ.ಅ.ಮು.ಕಾ(ಪಂ.ರಾಜ್), ಗ್ರಾ.ಅ & ಪಂ.ರಾ ಇಲಾಖೆ ರವರಿಂದ ಟಿಪ್ಪಣಿ ಅನುಮೋದಿಸಲ್ಪಟ್ಟಿದೆ.)**

21.06.22

ಆಯುಕ್ತರು
ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ
ಬೆಂಗಳೂರು.

**ಇವರಿಗೆ:**

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಜಂಟಿ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
3. ನಿರ್ದೇಶಕರು, ಎನ್.ಎಂ.ಸಿ., ಖಜಾನೆ ಇಲಾಖೆ, ಖನಿಜ ಭವನ, ಬೆಂಗಳೂರು.
4. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಕಾವೇರಿ ಭವನ, ಬೆಂಗಳೂರು-01
5. ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಕೆ.ಆರ್.ವೃತ್ತ, ಬೆಂಗಳೂರು
6. ವ್ಯವಸ್ಥಾಪಕ ನಿರ್ದೇಶಕರು, ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಪಿ.ಬಿ.ರಸ್ತೆ, ನವನಗರ, ಹುಬ್ಬಳ್ಳಿ-580029
7. ವ್ಯವಸ್ಥಾಪಕ ನಿರ್ದೇಶಕರು, ಗುಲ್ಬರ್ಗ ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಸ್ಟೇಷನ್ ರಸ್ತೆ, ಕಲ್ಬುರ್ಗಿ-585101.
8. ವ್ಯವಸ್ಥಾಪಕ ನಿರ್ದೇಶಕರು, ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಎ.ಬಿ.ಶೆಟ್ಟಿ ವೃತ್ತ, ಮಂಗಳೂರು-575001.
9. ವ್ಯವಸ್ಥಾಪಕ ನಿರ್ದೇಶಕರು, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ನಂ.29, ವಿಜಯನಗರ 2ನೇ ಹಂತ, ಹಿನ್ಕಲ್, ಮೈಸೂರು- 570017.

10. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
11. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯಿತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು (ಆಯಾ ತಾಲ್ಲೂಕು ವ್ಯಾಪ್ತಿಯ ಗ್ರಾಮ ಪಂಚಾಯಿತಿಗಳಿಗೆ ಈ ಆದೇಶದ ಪ್ರತಿಯನ್ನು ತಲುಪಿಸುವುದು)
12. ಖಜಾನಾಧಿಕಾರಿ, ರಾಜ್ಯ ಹುಜೂರ್ ಖಜಾನೆ, ನೃಪತುಂಗ ರಸ್ತೆ, ಬೆಂಗಳೂರು
13. ಉಪ ನಿರ್ದೇಶಕರು, ಎನ್.ಎಂ.ಸಿ., ಖಜಾನೆ ಇಲಾಖೆ, ಖನಿಜ ಭವನ, ಬೆಂಗಳೂರು.
14. ವ್ಯವಸ್ಥಾಪಕರು, ಭಾರತೀಯ ಸ್ಟೇಟ್‌ಬ್ಯಾಂಕ್, ವಿಧಾನಸೌಧ ಶಾಖೆ, ಬೆಂಗಳೂರು-01-ಇವರಿಗೆ ಅಗತ್ಯಕ್ರಮಕ್ಕಾಗಿ.
15. ಮುಖ್ಯ ಸಂಪಾದಕರು, ಕರ್ನಾಟಕ ವಿಕಾಸ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
16. ಇ-ಆಡಳಿತ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ- ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು
17. ಶಾಖಾ ರಕ್ಷಾ ಕಡತ

**ಪ್ರತಿ ಮಾಹಿತಿಗಾಗಿ:**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರು, ವಿಧಾನಸೌಧ ಇವರ ಆಪ್ತ ಕಾರ್ಯದರ್ಶಿ
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ರವರ ಆಪ್ತ ಕಾರ್ಯದರ್ಶಿ, ಆರ್ಥಿಕ ಇಲಾಖೆ.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಆಪ್ತ ಕಾರ್ಯದರ್ಶಿ.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ರವರ ಆಪ್ತ ಕಾರ್ಯದರ್ಶಿ
5. ನಿರ್ದೇಶಕರು(ಪಂಚಾಯತ್ ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
6. ಸರ್ಕಾರದ ಅಧೀನ ಕಾರ್ಯದರ್ಶಿ, ವೆಚ್ಚ-6, ಆರ್ಥಿಕ ಇಲಾಖೆ, ವಿಧಾನಸೌಧ.
7. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
8. ನಿರ್ದೇಶಕರು, ಯೋಜನಾ ಉಸ್ತುವಾರಿ ಮತ್ತು ಮಾಹಿತಿ ವಿಭಾಗ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.